# ವಸಾಹತು ಕಾಲದ ವಿಜಯಪುರ ಜಿಲ್ಲೆಯ ಆಡಳಿತ ಕಟ್ಟಡಗಳು ಮತ್ತು ಅವುಗಳ ಸಂರಕ್ಷಣೆ

**ಪಿ.ಬಿ. ಬಿರಾದಾರ್**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯಪುರ.

DOI: https://doi.org/10.5281/zenodo.17295997

## ABSTRACT:

ವಸಾಹತು ಕಾಲದ ವಿಜಯಪುರ ಜಿಲ್ಲೆಯಲ್ಲಿ ಬ್ರಿಟಿಷರು ಆಡಳಿತಾತ್ಮಕ ಕಟ್ಟಡಗಳ ಸಂರಕ್ಷಣೆಗೆ ಹೆಚ್ಚಿನ ಗಮನ ನೀಡಿದರು. 1848ರ ನಂತರ ಬ್ರಿಟಿಷರು ಜಿಲ್ಲೆಯನ್ನು ನೇರವಾಗಿ ಆಡಳಿತಕ್ಕೆ ತೆಗೆದುಕೊಂಡು, ಕಲಾದಗಿ ಜಿಲ್ಲೆಯಿಂದ ಜಿಲ್ಲಾ ಕೇಂದ್ರವನ್ನು ವಿಜಯಪುರಕ್ಕೆ ವರ್ಗಾಯಿಸುವುದರ ಮೂಲಕ ಇಲ್ಲಿನ ಕಟ್ಟಡಗಳ ದುರಸ್ತಿ ಕಾರ್ಯ ಮತ್ತು ಸಂರಕ್ಷಣೆಗೆ ಆದ್ಯತೆ ನೀಡಿದರು. ಈ ಸಂದರ್ಭದಲ್ಲಿ ಆದಿಲ್‌ಶಾಹಿ ವಾಸ್ತುಕಲಾ ಸ್ಮಾರಕಗಳನ್ನು ದುರಸ್ತಿಗೊಳಿಸಿ ಸಾರ್ವಜನಿಕ ಹಾಗೂ ಆಡಳಿತ ಸೇವೆಗಳಿಗೆ ಬಳಸಿದರು. ಆಡಳಿತ ಕಚೇರಿಗಳು, ನ್ಯಾಯಾಲಯ, ಖಜಾನೆ, ಪೊಲೀಸ್ ಕಚೇರಿ ಸೇರಿದಂತೆ ಮುಂತಾದ ಸೇವೆಗಳನ್ನು ನಖರಖಾನಾ, ಅರಕಿಲ್ಲೆ, ಆಸರ್ ಮಹಲ್, ಮುಸ್ತಫ ಖಾನ್ ಸರಾಯಿ, ಅದಾಲತ್ ಮಹಲ್, ದೌಲಿಯಾ ಯಾಕೂತ್ ಮಹಲ್, ಚೀನಿ ಮಹಲ್, ಆನಂದ ಮಹಲ್ ಇತ್ಯಾದಿ ಕಟ್ಟಡಗಳನ್ನು ಬ್ರಿಟಿಷರು ಸರಿಪಡಿಸಿ ತಮ್ಮ ಆಡಳಿತ ಕಾರ್ಯಗಳಿಗೆ ಉಪಯೋಗಿಸಿದರು. ಈ ಕಟ್ಟಡಗಳಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ವಾಸ್ತು ಶೈಲಿಯ ಸಂಯೋಜನೆ ಕಂಡುಬರುತ್ತದೆ. ಬ್ರಿಟಿಷರು ನಿರಂತರ ದುರಸ್ತಿ, ಪ್ರವೇಶ ನಿಯಂತ್ರಣ, ಭದ್ರತಾ ಕ್ರಮ, ದಾಖಲೆ ತಯಾರಿ ಮತ್ತು ಸಾರ್ವಜನಿಕ ಜಾಗೃತಿಯ ಮೂಲಕ ಈ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯನ್ನು ಮುಂದುವರೆಸಿದರು. ಈ ಕಾರ್ಯಗಳಿಂದ ವಿಜಯಪುರದ ವಾಸ್ತುಶಿಲ್ಪ, ಆಡಳಿತ ಪರಂಪರೆ ಮತ್ತು ಸಾಮಾಜಿಕ ಇತಿಹಾಸವನ್ನು ಅಧ್ಯಯನ ಮಾಡಲು ಅನುಕೂಲವಾಯಿತು. ಈ ವಿಷಯದಲ್ಲಿ ನಾವು ಬ್ರಿಟಿಷರಿಗೆ ಋಣಿಯಾಗಿದ್ದೇವೆ.

## KEYWORDS:

ಸಂರಕ್ಷಣೆ, ಮಹಲ್, ಅರಕಿಲ್ಲೆ, ಸ್ಮಾರಕಗಳು, ವಾಸ್ತುಶಿಲ್ಪ

### ಪರಿಚಯ

ವಿಜಯಪುರ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಇತಿಹಾಸ ಪ್ರಸಿದ್ಧ ಸ್ಮಾರಕಗಳು ಮತ್ತು ವಾಸ್ತು ಶಿಲ್ಪ ಕಲಾ ಪರಂಪರೆಗೆ ಪ್ರಸಿದ್ಧವಾಗಿದೆ. 1848ರಲ್ಲಿ ಲಾರ್ಡ್ ಡಾಲ್ ಹೌಸಿ ಜಾರಿಗೆ ತಂದಿದ್ದ ದತ್ತು ಮಕ್ಕಳಿಗೆ ಉತ್ತರಾಧಿಕಾರದ ಹಕ್ಕಿಲ್ಲ ಎಂಬ ಕಾಯ್ದೆಯಿಂದಾಗಿ ಸತಾರದ ಮರಾಠ ಅರಸರು ಅಧಿಕಾರ ಕಳೆದುಕೊಂಡಿದ್ದರಿಂದ ಸತಾರ ಪ್ರಾಂತದ ಭಾಗವಾಗಿದ್ದ ಬಿಜಾಪುರ ಪ್ರದೇಶವು ಬ್ರಿಟಿಷರ ನೇರ ಆಳ್ವಿಕೆಗೆ ಒಳಗಾಯಿತು. ಪ್ರಾರಂಭದಲ್ಲಿ ಬಿಜಾಪುರವು ಪುಣಾದ ತಾಲೂಕಾಗಿ ನಂತರ ಸೋಲಾಪುರ ಜಿಲ್ಲೆಯ ತಾಲೂಕಾಗಿ ಮುಂದೆ ಕಲಾದಗಿ ಜಿಲ್ಲೆಯ ತಾಲೂಕು ಕೇಂದ್ರವಾಗಿ ಮುಂದುವರೆಯಿತು. ಕರ್ನಲ್ ಮೆಡೋಸ್ ಟೇಲರ್ ರವರು ಬರೆದ The Noble Queen–A Romance of Indian History, ಜೇಮ್ಸ್ ಫರ್ಗುಸನ್ ರು ಬರೆದ Architecture at Beejapoor,

ಜೇಮ್ಸ್ ಬರ್ಡ್ ನ Ruined City of Bijapur, ಜಾನ್ ಬ್ರಿಗ್ಸ್ ನ Tarikh–e–Farishtah ಕೃತಿಗಳು ಪ್ರಾರಂಭದಲ್ಲಿ ಬಿಜಾಪುರದ ಕುರಿತಾಗಿ ಬ್ರಿಟಿಷರಲ್ಲಿ ಗಮನ ಸೆಳೆದವು.

1876 ರಲ್ಲಿ ದಕ್ಷಿಣ ವಿಭಾಗದ ಮುಖ್ಯ ಇಂಜಿನಿಯರ್ ಕರ್ನಲ್ ಸೇಂಟ್ ಕ್ಲೇರ್ ವಿಲ್ಕಿನ್ಸ್ ನು ಜಿಲ್ಲಾ ಕೇಂದ್ರ ಸ್ಥಾನವನ್ನು ಕಲಾದಗಿಯಿಂದ ವಿಜಯಪುರ ನಗರಕ್ಕೆ ವರ್ಗಾಯಿಸಲು ವರದಿ ಸಲ್ಲಿಸಿದನು.ವಿಲ್ಕಿನ್ಸ್ ನು ಬಾಂಬೆ ಸರ್ಕಾರಕ್ಕೆ ಮತ್ತೊಮ್ಮೆ ವರದಿ ಮಾಡಿ, 6591 ಜನಸಂಖ್ಯೆ ಇರುವ ಕಲಾದಗಿಯಲ್ಲಿ ಜಿಲ್ಲಾ ಆಡಳಿತಾತ್ಮಕ ಕಟ್ಟಡಗಳನ್ನು ನಿರ್ಮಿಸಲು ರೂ. 1,04,000 ಅಗತ್ಯವಿದೆ, ಆದರೆ ಬಿಜಾಪುರದಲ್ಲಿ ಇರುವ ಆದಿಲ್ ಶಾಹಿ ಕಟ್ಟಡಗಳ ದುರಸ್ತಿ ಕಾರ್ಯಕ್ಕಾಗಿ ರೂ. 97,000 ಗಳ ಅವಶ್ಯಕತೆ ಇದೆ ಎಂದು ವರದಿ ಮಾಡಿದನು. 1876 ನವೆಂಬರ್ ತಿಂಗಳಿನಲ್ಲಿ ಸರ್ಕಾರದಿಂದ ಒಪ್ಪಿಗೆ ಸಿಕ್ಕಿತ್ತಾದರೂ, ತೀವ್ರ ಬರಗಾಲ ಸಂಭವಿಸಿದ್ದರಿಂದಾಗಿ ವಿಜಯಪುರ ನಗರದಲ್ಲಿರುವ ಕಟ್ಟಡಗಳ ದುರಸ್ತಿ ಕಾರ್ಯವು 1879 ರವರೆಗೆ ಸ್ಥಗಿತಗೊಂಡಿತು. ಮುಂದೆ 1885ರಲ್ಲಿ ಜಿಲ್ಲಾ ಕೇಂದ್ರ ಸ್ಥಾನವನ್ನು ಕಲಾದಗಿಯಿಂದ ವಿಜಯಪುರ ನಗರಕ್ಕೆ ವರ್ಗಾಯಿಸಲಾಯಿತು. ಇದರೊಂದಿಗೆ ನಗರದಲ್ಲಿರುವ ಅನೇಕ ಸ್ಮಾರಕಗಳು ದುರಸ್ತಿಗೊಂಡು ಸರ್ಕಾರಿ ಕಚೇರಿಗಳಾಗಿ ಮಾರ್ಪಾಡಾದವು.

ಬ್ರಿಟಿಷರಿಂದ ನಿರ್ಮಾಣಗೊಂಡ ಮತ್ತು ಬಳಸಲ್ಪಟ್ಟ ಕಟ್ಟಡಗಳು ಕೇವಲ ಕಟ್ಟಡಗಳಾಗಿರದೆ, ವಸಾಹತು ಕಾಲದ ಆಡಳಿತ ಶೈಲಿ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳ ಜೀವಂತ ದಾಖಲೆಗಳಾಗಿವೆ. ಸಾರ್ವಜನಿಕರ ಜಾಗೃತಿಯ ಕೊರತೆ, ಹಳೆ ಕಟ್ಟಡಗಳ ನಿರ್ಲಕ್ಷ್ಯ , ನಗರೀಕರಣದ ಒತ್ತಡ ಮತ್ತು ಕಟ್ಟಡಗಳ ಶಿಥಿಲೀಕರಣ ಮುಂತಾದ ಸವಾಲುಗಳಿಗೆ ಒಳಗಾಗಿವೆ. ಬ್ರಿಟಿಷರ ಇತಿಹಾಸ ಪ್ರಜ್ಞೆ ಮತ್ತು ಸ್ಮಾರಕಗಳ ಸಂರಕ್ಷಣಾ ಕಾರ್ಯಗಳ ಕಾರಣದಿಂದ ಇಂದಿಗೂ ಇಲ್ಲಿನ ಐತಿಹಾಸಿಕ ಕಟ್ಟಡಗಳನ್ನು ದುರಸ್ತಿ ಸ್ಥಿತಿಯಲ್ಲಿ ನೋಡಲು ಲಭ್ಯವಾಗಿವೆ. ಈ ದಿಶೆಯಲ್ಲಿ ನಾವು ಬ್ರಿಟಿಷರಿಗೆ ಋಣಿಯಾಗಿದ್ದೇವೆ.

**ಬಿಜಾಪುರದ ವಸಾಹತು ಕಾಲದ ಆಡಳಿತ ಕಟ್ಟಡಗಳ ಪ್ರಾಮುಖ್ಯತೆ**

1. ಬಿಜಾಪುರ ಜಿಲ್ಲೆಯಲ್ಲಿ ಬ್ರಿಟಿಷರು ರೂಪಿಸಿದ ಆಡಳಿತ ಕ್ರಮ, ನ್ಯಾಯಾಂಗ ವ್ಯವಸ್ಥೆ, ಕಚೇರಿ ವ್ಯವಸ್ಥೆ, ಸಾರ್ವಜನಿಕ ಸೇವಾ ಕಾರ್ಯಗಳಾದ ಆರೋಗ್ಯ, ರಕ್ಷಣೆ, ಶಿಕ್ಷಣ ಮತ್ತು ಮೂಲಸೌಕರ್ಯ ಮುಂತಾದವುಗಳ ಬೆಳವಣಿಗೆಯನ್ನು ವಿವರಿಸುವಲ್ಲಿ ಆಡಳಿತ ಕಟ್ಟಡಗಳು ಪ್ರಾಥಮಿಕ ಆಧಾರಗಳನ್ನು ಒದಗಿಸುತ್ತವೆ.
2. ವಸಾಹತು ಕಾಲದಲ್ಲಿ ಬ್ರಿಟಿಷರಿಂದ ಜಿಲ್ಲೆಯಲ್ಲಿ ರೂಪುಗೊಂಡ ಕಟ್ಟಡಗಳು ಭಾರತೀಯ ಮತ್ತು ಪಾಶ್ಚಾತ್ಯ ವಾಸ್ತು ಶೈಲಿಗಳ ಸಂಯೋಜನೆಯಿಂದ ಕೂಡಿವೆ. ಇವುಗಳು ಸಾಂಸ್ಕೃತಿಕ ವೈವಿಧ್ಯತೆಯನ್ನು ಸೂಚಿಸುತ್ತವೆ. ಉದ್ದನೆಯ ವರಾಂಡಗಳು, ಗವಾಕ್ಷ ಬಾಗಿಲುಗಳು, ಹೈ ಸೀಲಿಂಗ್, ಪ್ರಮಾಣ ಬದ್ಧ ಕಲ್ಲುಗಳ ಬಳಕೆಯು ಬ್ರಿಟಿಷರ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳಾಗಿವೆ.
3. ಸಂಶೋಧಕರಿಗೆ ಮತ್ತು ಇತಿಹಾಸ ಆಸಕ್ತರಿಗೆ ವಸಾಹತು ಕಾಲದ ಆಡಳಿತ ತಂತ್ರಗಳನ್ನು ಅಧ್ಯಯನ ಮಾಡಲು ಅನುವು ಮಾಡಿಕೊಡುತ್ತವೆ.
4. ವಸಾಹತು ಕಾಲದ ಆಡಳಿತ ಕಟ್ಟಡಗಳು ಕೇವಲ ಹಳೆಯ ಕಟ್ಟಡಗಳಲ್ಲ, ಅವು ಆಡಳಿತ, ಸಮಾಜ ಇತಿಹಾಸ ಮತ್ತು ವಾಸ್ತುಶಿಲ್ಪದ ಜೀವಂತ ಸಾಕ್ಷಿಗಳಾಗಿವೆ.

**ಬ್ರಿಟಿಷರ ಆಡಳಿತ ಕಟ್ಟಡಗಳ ಸಂರಕ್ಷಣಾ ಕಾರ್ಯಗಳು**

ಬ್ರಿಟಿಷರು ವಿಜಾಪುರ ಜಿಲ್ಲೆಯಲ್ಲಿ ಆಡಳಿತ ರೂಪಿಸುವ ಉದ್ದೇಶದಿಂದ ಅನೇಕ ಕಟ್ಟಡಗಳನ್ನು ನಿರ್ಮಿಸಿದರು ಮತ್ತು ಐತಿಹಾಸಿಕವಾಗಿ ಇರುವ ಕೆಲವು ಸ್ಮಾರಕಗಳ ದುರಸ್ತಿ ಕಾರ್ಯಗಳನ್ನು ಕೈಗೊಂಡು ಬಳಕೆಗೆ ಯೋಗ್ಯವನ್ನಾಗಿ ರೂಪಿಸಿದರು. ಈ ದಿಶೆಯಲ್ಲಿ ಬ್ರಿಟಿಷರು ಕೈಗೊಂಡ ಮುಖ್ಯ ಸಂರಕ್ಷಣಾ ಕ್ರಮಗಳು:

**1. ನಿಯಮಿತ ದುರಸ್ತಿ ಕಾರ್ಯಗಳು**

ವಿಜಯಪುರ ಜಿಲ್ಲೆಯಲ್ಲಿ ಬ್ರಿಟಿಷರು ನಿರ್ಮಿಸಿದ ಆಡಳಿತ ಕಟ್ಟಡಗಳ ಮತ್ತು ಆಡಳಿತ ಕಟ್ಟಡಗಳಾಗಿ ಬಳಸುತ್ತಿರುವ ಸ್ಮಾರಕಗಳ ನಿಯಮಿತ ದುರಸ್ತಿ ಕಾರ್ಯವನ್ನು ಕೈಗೊಂಡರು. ಮಳೆ, ಬಿಸಿಲು, ಧೂಳು ಮತ್ತು ಕಾಲದ ಹಾನಿಯಿಂದ ಶಿಥಿಲಗೊಂಡ ಕಟ್ಟಡಗಳನ್ನು ಸಂರಕ್ಷಿಸಲು ನಿರಂತರ ನಿರ್ವಹಣೆ ಮಾಡುತ್ತಿದ್ದರು.

**2. ಪ್ರವೇಶ ನಿಯಂತ್ರಣ ಮತ್ತು ಭದ್ರತಾ ಕ್ರಮಗಳು**

ಬ್ರಿಟಿಷರು ಭಾರತದಲ್ಲಿ ಮೊಟ್ಟ ಮೊದಲು ಮಾಡಿದ ಅತಿ ಪ್ರಮುಖ ಕಾರ್ಯವೆಂದರೆ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ. ಇದರೊಂದಿಗೆ ಐತಿಹಾಸಿಕ ಮೌಲ್ಯವಿರುವ ಕಟ್ಟಡಗಳಿಗೆ ಬ್ರಿಟಿಷರು ಭದ್ರತಾ ಕ್ರಮಗಳನ್ನು ಜಾರಿಗೊಳಿಸಿದರು. ಈ ಕಟ್ಟಡಗಳ ಪ್ರವೇಶವನ್ನು ನಿಯಂತ್ರಿಸಲು ಗವಾಕ್ಷ ಬಾಗಿಲುಗಳು ಮತ್ತು ಕೋಟಿಂಗ್/ಸೀಲ್‌ಗಳ ಮೂಲಕ ಹಾನಿಯಾಗುವುದನ್ನು ನಿಯಂತ್ರಿಸಿದರು.

**3. ದಾಖಲೆ ಮತ್ತು ಪರಿಶೀಲನೆ**

ಬ್ರಿಟಿಷರು ಇಲ್ಲಿರುವ ಕಟ್ಟಡಗಳ ಇತಿಹಾಸ, ವಾಸ್ತುಶಿಲ್ಪ, ಆಕಾರವನ್ನು ದಾಖಲೆ ರೂಪದಲ್ಲಿ ಇಡುತ್ತಿದ್ದುದು ಕಟ್ಟಡದ ಪ್ರಾಮುಖ್ಯತೆಯನ್ನು ತಿಳಿಸುತ್ತಿತ್ತು. ಕಟ್ಟಡದ ಸ್ಥಿತಿಯನ್ನು ಕಾಲಕಾಲಕ್ಕೆ ಪರಿಶೀಲಿಸಿ ಮುಂದಿನ ದುರಸ್ತಿ ಅಥವಾ ಪುನರ್ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು.

**4. ಸಾರ್ವಜನಿಕ ಜಾಗೃತಿ**

ಬ್ರಿಟಿಷರು ಐತಿಹಾಸಿಕ ಕಟ್ಟಡಗಳ ಮಹತ್ವವನ್ನು ದಾಖಲಿಸಿ ಸಾರ್ವಜನಿಕರ ನಡುವೆ ಜಾಗೃತಿ ಕಾರ್ಯಕ್ರಮವನ್ನು ಕೈಗೊಳ್ಳುವುದರ ಮೂಲಕ ಸ್ಮಾರಕಗಳ ಸಂರಕ್ಷಣಾ ಕಾರ್ಯದಲ್ಲಿ ಸಾರ್ವಜನಿಕರ ಸಹಭಾಗಿತ್ವದ ಮಹತ್ವವನ್ನು ತಿಳಿಸಿದರು.

**ಪ್ರಮುಖ ಕಟ್ಟಡಗಳು ಮತ್ತು ಅವುಗಳ ಸಂರಕ್ಷಣೆ**

ಸುಗಮ ಆಡಳಿತಕ್ಕಾಗಿ ಬ್ರಿಟಿಷರು ನಿರ್ಮಿಸಿದ ಕಟ್ಟಡಗಳು ಮತ್ತು ಆಡಳಿತ ನಿರ್ವಹಣೆಗಾಗಿ ಬಳಸಿದ ಸ್ಮಾರಕಗಳು ಪ್ರಸ್ತುತ ಕಾಲದವರೆಗೂ ಉಪಯೋಗರ್ಹತೆಯನ್ನು ಪಡೆದಿವೆ. ಈ ದಿಶೆಯಲ್ಲಿ ನಾವು ಬ್ರಿಟಿಷರಿಗೆ ಕೃತಜ್ಞರಾಗಿದ್ದೇವೆ. ಬಿಜಾಪುರದ ಕಟ್ಟಡಗಳ ಸಂರಕ್ಷಣಾ ಕಾರ್ಯವನ್ನು ಕೈಗೊಂಡವರಲ್ಲಿ ಮೊದಲಿಗರೆಂದರೆ ಸತಾರದ ಅರಸ ಶಹಾಜಿಯವರು. ಇವರ ಮುತುವರ್ಜಿಯಿಂದಾಗಿ ಬಿಜಾಪುರದ ಕಟ್ಟಡಗಳ ಸಂರಕ್ಷಣೆಗಾಗಿ ಪ್ರತಿ ವರ್ಷ ರೂ. 1000 ಹಣವನ್ನು ಬಿಡುಗಡೆಗೊಳಿಸಲಾಗುತ್ತಿತ್ತು.

1848–49 ರಲ್ಲಿ ಸತಾರದ ಬ್ರಿಟಿಷ್ ನಿವಾಸಿಯಾದ ಬಾರ್ಟ್ಲೆ ಫ್ರೀರೆ (Bartle Frere) ನ ಪ್ರಯತ್ನದ ಫಲವಾಗಿ ಬಾಂಬೆ ಸರ್ಕಾರವು ಬಿಜಾಪುರದ ಕಟ್ಟಡಗಳ ದುರಸ್ತಿ ಕಾರ್ಯಕ್ಕಾಗಿ ರೂ. 489 ಮತ್ತು ರೂ. 5200 ಗಳನ್ನು ಎರಡು ಹಂತಗಳಲ್ಲಿ 1849–50ರ ವರ್ಷದಲ್ಲಿ

ಬಿಡುಗಡೆ ಮಾಡಿತು. ಈ ಅನುದಾನವನ್ನು ಬಳಸಿಕೊಂಡ ಸತಾರದ ಇಂಜಿನಿಯರ್ ಕ್ಯಾಪ್ಟನ್ ಪಿ.ಎಲ್. ಹರ್ಟರು ಕಟ್ಟಡಗಳ ದುರಸ್ತಿ ಕಾರ್ಯವನ್ನು ಕೈಗೊಂಡರು.

**ಆಸಾರ ಮಹಲ್**

ಬಿಜಾಪುರ ನಗರದಲ್ಲಿರುವ ಆಸರ್ ಮಹಲನ್ನು 1640 ರ ಸುಮಾರಿಗೆ ಮೊಹಮ್ಮದ್ ಆದಿಲ್ ಶಾ ಯು ನಿರ್ಮಿಸಿದರು.ಆದಿಲ್ ಶಾಹಿಗಳ ಕಾಲದಲ್ಲಿ ಈ ಕಟ್ಟಡವನ್ನು ಅದಾಲತ್ ಮಹಲಾಗಿ ಅಂದರೆ ನ್ಯಾಯಾಂಗ ಕಾರ್ಯ ಚಟುವಟಿಕೆಗಳಿಗಾಗಿ ಬಳಸಲಾಗುತ್ತಿತ್ತು. ಆಸರ್ ಮಹಲಿನ ಮೂಲ ಹೆಸರು ದಾದ ಮಹಲ್ (Dad Mahal). ಬ್ರಿಟಿಷರು ಕೆಲವು ಕಾಲ ಕಾನೂನು ಮತ್ತು ನ್ಯಾಯಾಂಗ ಕೇಂದ್ರವಾಗಿ ಬಳಕೆ ಮಾಡಿದ್ದರು.ಬ್ರಿಟಿಷರು ಕಟ್ಟಡದ ಸೌಂದರ್ಯಕ್ಕೆ ದಕ್ಕೆಯಾಗದಂತೆ ಆಸರ್ ಮಹಲಿನ ಹಾನಿಗೊಳಗಾದ ಮರದ ಬೃಹತ್ ಕಂಬಗಳನ್ನು ಮರು ಜೋಡಿಸಿದರು ಮತ್ತು ಬಿರುಕುಗಳನ್ನು ಬಿಟ್ಟ ಛಾವಣಿಯನ್ನು ದುರಸ್ತಿಗೊಳಿಸಿದರು.

**ನಖರಖಾನಾ/ನಗಾರ ಖಾನಾ**

ಗೋಲ್ ಗುಂಬಜ್ ದ ಆವರಣದಲ್ಲಿರುವ ನಖರ ಖಾನಾ ಕಟ್ಟಡವನ್ನು ಮೊಹಮ್ಮದ್ ಆದಿಲ್ ಶಾಹಿಯ ಕಾಲದಲ್ಲಿ ನಿರ್ಮಿಸಲಾಗಿದೆ. ನಖರ ಖಾನಾ ಪದದ ಅರ್ಥ ಡೊಳ್ಳು-ನಗಾರಿ ಮನೆ. ಸುಲ್ತಾನರಿಗೆ ರಾಜ ಮರ್ಯಾದೆಯ ಘೋಷಣೆ ಕೂಗಲು ಹಾಗೂ ಧಾರ್ಮಿಕ, ಸಾಮಾಜಿಕ ಸಮಾರಂಭಗಳಲ್ಲಿ ಡೊಳ್ಳು-ನಗಾರಿ-ತಾಳ ಮದ್ದಲೆಗಳನ್ನು ಬಳಸುವ ವಿಶೇಷ ಕಟ್ಟಡವಾಗಿತ್ತು.

19ನೇ ಶತಮಾನದ ಉತ್ತರಾರ್ಧದ ಹೊತ್ತಿನಲ್ಲಿ ನಖರ ಖಾನಾ ಕಟ್ಟಡವು ಹಾನಿಗೊಂಡ ಸ್ಥಿತಿಯಲ್ಲಿತ್ತು. ಇದರ ಗೋಡೆಗಳು ಕುಸಿಯುವ ಸ್ಥಿತಿಯಲ್ಲಿದ್ದವು ಮತ್ತು ಮೇಲ್ಛಾವಣಿಯಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದವು. ಇದರ ಸುತ್ತಲೂ ಸಾರ್ವಜನಿಕರು ಅನಧಿಕೃತವಾದ ಮನೆಗಳನ್ನು ನಿರ್ಮಿಸಿಕೊಂಡಿದ್ದರು. ಬ್ರಿಟಿಷರು ಈ ಕಟ್ಟಡದ ಐತಿಹಾಸಿಕ ಮಹತ್ವವನ್ನು ಅರಿತು ಸಂರಕ್ಷಣೆಯ ಕಾರ್ಯಕ್ಕೆ ಕೈ ಹಾಕಿದರು. ಅನಧಿಕೃತ ಖಾಸಗಿ ಮನೆಗಳನ್ನು ತೆರವುಗೊಳಿಸಿ ಗೋಲ್ ಗುಂಬಜ್ ಆವರಣದ ಸುತ್ತಲೂ ಎತ್ತರವಾದ ಗೋಡೆಯನ್ನು ನಿರ್ಮಿಸುವುದರ ಮೂಲಕ ಸಾರ್ವಜನಿಕ ಪ್ರವೇಶವನ್ನು ನಿಯಂತ್ರಿಸಿ ಸ್ಮಾರಕದ ಗೌರವವನ್ನು ಕಾಪಾಡಿದರು. ಇದರ ರಕ್ಷಣೆಗಾಗಿ ಸಂರಕ್ಷಣಾಧಿಕಾರಿಗಳನ್ನು ನೇಮಿಸಿದರು.

ನಖರ ಖಾನಾದ ಗೋಡೆಗಳನ್ನು ಕಂಬಗಳನ್ನು ದುರಸ್ತಿಗೊಳಿಸಿ ಅದರ ಬಿರುಕು ಬಿಟ್ಟ ಮೇಲ್ಛಾವಣಿಯನ್ನು ಸರಿಪಡಿಸಿದರು. ಅದರ ಶಿಲ್ಪ ಕಲೆ ಮತ್ತು ಅಲಂಕಾರಿಕ ಭಾಗಗಳನ್ನು ಸಾಧ್ಯವಾದಷ್ಟು ಮೂಲ ಸ್ವರೂಪದಲ್ಲಿ ಉಳಿಸಿಕೊಳ್ಳಲಾಯಿತು. ನಖರ ಖಾನಾವನ್ನು ಪ್ರಾರಂಭದಲ್ಲಿ ಬ್ರಿಟಿಷರು ಪ್ರಯಾಣಿಕರ ಬಂಗಲೆಯಾಗಿ ಉಪಯೋಗಿಸುತ್ತಿದ್ದರು. ಕೆಲಕಾಲ ಜಿಲ್ಲಾ ಕಚೇರಿಯನ್ನಾಗಿ ನಂತರ ದಾಖಲೆಗಳ ಸಂಗ್ರಹಕಾರವಾಗಿ ಮುಂದೆ 1892 ರಲ್ಲಿ ಮ್ಯೂಸಿಯಂನ್ನಾಗಿ ರೂಪಿಸಿದರು.

**ಅರಕಿಲ್ಲೆ**

ಬಿಜಾಪುರ ನಗರದಲ್ಲಿ ಅತ್ಯಂತ ಪ್ರಮುಖವಾದ ಆಡಳಿತಾತ್ಮಕ ಸ್ಮಾರಕವೆಂದರೆ ಅರಕಿಲ್ಲೆ. ಇದನ್ನು ಯುಸೂಫ್ ಆದಿಲ್ ಶಾಹಿಯು ನಿರ್ಮಿಸಲಾರಂಭಿಸಿದನು.ಇದೊಂದು ಕಟ್ಟಡಗಳ ಸಮುಚ್ಚಯವಾಗಿದ್ದು, ಅರಸು ಪರಿವಾರದವರು ವಾಸಿಸುವ ಕೊಠಡಿಗಳು,

ಆಡಳಿತಕ್ಕೆ ಸಂಬಂಧಿಸಿದ ದರ್ಬಾರ, ನ್ಯಾಯಾಲಯ, ಕಂದಾಯ, ಖಜಾನೆ ಮತ್ತು ಸೈನಿಕ ಕಾರ್ಯಾಲಯಗಳಿಗಾಗಿ ಈ ಕಟ್ಟಡವನ್ನು ಬಳಸಿಕೊಳ್ಳಲಾಗುತ್ತಿತ್ತು. ಫಾರೂಕ್ ಮಹಲ್ ಎಂತಲೂ ಕರೆಯಲಾಗುವ ಇದನ್ನು ಜಿಲ್ಲಾಧಿಕಾರಿಯ ಕಚೇರಿ, ಖಜಾನೆ, ಜಿಲ್ಲಾ ನ್ಯಾಯಾಲಯ, ಪೊಲೀಸ್ ವರಿಷ್ಠಾಧಿಕಾರಿಯ ಕಚೇರಿ, ಗ್ರಂಥಾಲಯ ಮುಂತಾದ ಸರ್ಕಾರದ ಸೇವೆಗಳಿಗಾಗಿ ಬ್ರಿಟಿಷರು ಉಪಯೋಗಿಸಿಕೊಂಡಿದ್ದರು. ಹಾನಿಗೊಳಗಾದ ಈ ಕಟ್ಟಡದ ಬಾಗಿಲುಗಳನ್ನು ಮತ್ತು ಕಿಟಕಿಗಳನ್ನು ಹಾಗೂ ಹಾನಿಗೊಳಗಾದ ಗೋಡೆಗಳಿಗೆ ಪ್ಲಾಸ್ಟರ್ ನ್ನು ಮಾಡಿ ದುರಸ್ತಿಗೊಳಿಸುವುದರ ಮೂಲಕ ಬ್ರಿಟಿಷರು ಈ ಕಟ್ಟಡಗಳನ್ನು ಬಳಸಿಕೊಂಡರು. ಜಿಲ್ಲಾಧಿಕಾರಿಯ ಕಚೇರಿ, ಖಜಾನೆ, ಜಿಲ್ಲಾ ನ್ಯಾಯಾಲಯ, ಪೋಲಿಸ್ ವರಿಷ್ಠಾಧಿಕಾರಿಯ ಕಚೇರಿ, ಸೇನಾ ಸಾಮಗ್ರಿಗಳ ಸಂಗ್ರಹಣೆ, ಭೂ ದಾಖಲೆಗಳ ವಿಭಾಗ ಇದೇ ಕಟ್ಟಡದಲ್ಲಿ ಸ್ವಾತಂತ್ರ್ಯದ ನಂತರವೂ ಮುಂದುವರೆದಿದ್ದವು.

**ಮುಸ್ತಫ ಖಾನ್ ಸರಾಯಿ**

ಎರಡನೇ ಇಬ್ರಾಹಿಂ ಆದಿಲ್ ಶಾಹಿ ಮತ್ತು ಮಹಮ್ಮದ್ ಆದಿಲ್ ಶಾಹಿಯ ಕಾಲದಲ್ಲಿ ನವಾಬ ಮುಸ್ತಾಫ ಖಾನ್ ಎಂದು ಪ್ರಸಿದ್ಧಿ ಪಡೆದಿದ್ದ ಮತ್ತು ಮಂತ್ರಿ ಪದವಿಯಲ್ಲಿದ್ದ ಈತನು ಅಮೀನ್ ದರ್ಗಾದ ಹತ್ತಿರ ಪ್ರವಾಸಿಗಳಿಗಾಗಿ ಮತ್ತು ವ್ಯಾಪಾರಸ್ಥರಿಗಾಗಿ ಧರ್ಮಶಾಲೆಯನ್ನು ಕಟ್ಟಿಸಿದನು. ಬ್ರಿಟಿಷರು ಈ ಸ್ಮಾರಕವನ್ನು ದುರಸ್ತಿಗೊಳಿಸಿ ಜಿಲ್ಲಾ ಕಾರಾಗೃಹವಾಗಿ ರೂಪಗೊಳಿಸಿದರು. ಇದಕ್ಕೆ ತಗಲಿದ ಅಂದಾಜು ವೆಚ್ಚ 20,000 ರೂಪಾಯಿಗಳಾಗಿತ್ತು. ಕಾರಾಗೃಹವು 250 ಕೈದಿಗಳನ್ನು ಹೊಂದುವ ಸಾಮರ್ಥ್ಯ ಹೊಂದಿತ್ತು.

**ಅದಾಲತ್ ಮಹಲ್**

ಬ್ರಿಟಿಷರು ಅದಾಲತ್ ಮಹಲ್ ದ ಬಾಗಿಲು ಕಿಟಕಿಗಳನ್ನು ದುರಸ್ತಿಗೊಳಿಸುವುದರೊಂದಿಗೆ ಮತ್ತು ಇದರ ಚಾವಣಿಯನ್ನು ಸರಿಪಡಿಸಿ ಜಿಲ್ಲಾಧಿಕಾರಿಯ ವಾಸಸ್ಥಾನವನ್ನಾಗಿ ರೂಪಿಸಿದರು. ಇದಕ್ಕೆ ತಗಲಿದ ಅಂದಾಜು ವೆಚ್ಚ 15 ಸಾವಿರ ರೂಪಾಯಿಗಳು.

ದೌಲಿಯಾ ಯಾಕೂತ್ ಮಹಲ್ ನ್ನು ಪ್ರಥಮ ಸಹಾಯಕ ಜಿಲ್ಲಾಧಿಕಾರಿಯ ವಾಸಸ್ಥಾನವನ್ನಾಗಿ ಪರಿವರ್ತಿಸಲು ಮತ್ತು ದುರಸ್ತಿ ಗೊಳಿಸಲು ಮಾಡಿದ ಅಂದಾಜು ವೆಚ್ಚ 8500 ರೂಪಾಯಿಗಳು. ಚೀನಿ ಮಹಲನ್ನು ಪೊಲೀಸ್ ಅಧೀಕ್ಷಕರ ವಾಸಸ್ಥಾನವನ್ನಾಗಿ ರೂಪಿಸಲು ತಗುಲಿದ ಅಂದಾಜು ವೆಚ್ಚ 80599 ರೂಪಾಯಿಗಳು. ಆರ್ಷ್ ಮಹಲ್ ನ್ನು ಸಿವಿಲ್ ಸರ್ಜನ್ ನ ವಾಸಸ್ಥಾನವನ್ನಾಗಿ ರೂಪಗೊಳಿಸಲು ತಗುಲಿದ ಅಂದಾಜು ವೆಚ್ಚ ಹತ್ತು ಸಾವಿರ ಆಗಿತ್ತು. ಆನಂದ ಮಹಲನ್ನು ಕಾರ್ಯನಿರ್ವಾಹಕ ಇಂಜಿನಿಯರ್ ನ ವಾಸಸ್ಥಾನವನ್ನಾಗಿ ರೂಪಿಸಲು ಮತ್ತು ಅದರ ದುರಸ್ತಿ ಕಾರ್ಯಕ್ಕಾಗಿ ಬ್ರಿಟಿಷರು ಮಾಡಿದ ಅಂದಾಜು ವೆಚ್ಚ 4000 ರೂಪಾಯಿಗಳಾಗಿತ್ತು.

**ಉಪಸಂಹಾರ**

ಬ್ರಿಟಿಷರ ವಸಾಹತು ಕಾಲದ ಆಡಳಿತ ಕಟ್ಟಡಗಳು ವಿಜಯಪುರದ ಐತಿಹಾಸಿಕ ವಾಸ್ತುಶಿಲ್ಪ ಮತ್ತು ಸಮಾಜ ಇತಿಹಾಸದ ಜೀವಂತ ಸಾಕ್ಷಿಗಳಾಗಿವೆ. ಬ್ರಿಟಿಷರು ಈ ಜಿಲ್ಲೆಯ ಪ್ರಾಚೀನ ಸ್ಮಾರಕಗಳನ್ನು ಕೇವಲ ಬಳಕೆಯಲ್ಲಿಟ್ಟುಕೊಳ್ಳದೆ, ಅವುಗಳ ದುರಸ್ತಿ ಮತ್ತು ಸಂರಕ್ಷಣೆಗೆ ನಿರಂತರವಾಗಿ ಗಮನ ಹರಿಸಿದರು. ಅವರು ನಿರ್ಮಿಸಿದ ಅಥವಾ ಬಳಸಿದ ನಿರ್ವಹಣಾತ್ಮಕ ಕಟ್ಟಡಗಳಲ್ಲಿ ನ್ಯಾಯಾಲಯ, ಜಿಲ್ಲಾಧಿಕಾರಿ ಕಚೇರಿ, ಪೊಲೀಸ್, ಖಜಾನೆ

ಮತ್ತು ಸಾರ್ವಜನಿಕ ಸೇವಾ ಕಚೇರಿಗಳು ಸೇರಿದ್ದು, ಅವುಗಳಲ್ಲಿ ನಿಯಮಿತ ದುರಸ್ತಿ, ಪ್ರವೇಶ ನಿಯಂತ್ರಣ, ಭದ್ರತಾ ಕ್ರಮ, ದಾಖಲಾತಿ ತಯಾರಿ ಮತ್ತು ಸಾರ್ವಜನಿಕ ಜಾಗೃತಿ ಕ್ರಮಗಳನ್ನು ಅನುಷ್ಠಾನಗೊಳಿಸಿದ್ದರು. ಈ ಕ್ರಮಗಳ ಮೂಲಕ ಬ್ರಿಟಿಷರು ವಿಜಯಪುರದ ಐತಿಹಾಸಿಕ ಕಟ್ಟಡಗಳನ್ನು ಶಿಥಿಲೀಕರಣದಿಂದ ರಕ್ಷಿಸಿ, ಸಾಂಸ್ಕೃತಿಕ ವೈವಿಧ್ಯತೆ ಮತ್ತು ವಾಸ್ತುಶಿಲ್ಪ ಪರಂಪರೆಯನ್ನು ಉಳಿಸಿಕೊಂಡರು. ಅವರ ಸಂರಕ್ಷಣಾ ಪ್ರಯತ್ನಗಳು ಇಂದು ನಮಗೆ ಈ ಕಟ್ಟಡಗಳನ್ನು ಅಧ್ಯಯನ, ಪ್ರವೇಶ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಲಭ್ಯವಾಗುವಂತೆ ಮಾಡಿವೆ. ಹೀಗಾಗಿ, ಬ್ರಿಟಿಷರ ಪಾತ್ರವು ವಿಜಯಪುರದ ಆಡಳಿತ ಕಟ್ಟಡಗಳ ಉಳಿವಿನಲ್ಲಿ ಪ್ರಮುಖ ಮತ್ತು ಅವಿಸ್ಮರಣೀಯವಾಗಿದೆ.

**ಕೊನೆ ಟಿಪ್ಪಣಿಗಳು:**

1. Centenary Souvenir Bijapur Municipality 1854–1954 Page No. 32
2. Dr. Imaratwale., Bijapur Subha Page No. 344
3. Centenary Souvenir Bijapur Municipality 1854–1954 Page No. 32
4. Dr. Imaratwale., Bijapur Subha Page No. 335
5. Dr. Imaratwale., Bijapur Subha Page No. 337
6. Henry Cousins., Bijapur And It's Architectural Remains – Page No. 100
7. Centenary Souvenir Bijapur Municipality 1854–1954 Page No. 4
8. Centenary Souvenir Bijapur Municipality 1854–1954 Page No. 32
9. Dr. Imaratwale ., Bijapur Subha Page No. 344
10. Imaratwale ., Bijapur Subha Dr. Page No. 342–343

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.